**ದಿ:11.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ಪ್ರತಿವಾದಿ ನಂ.**1** ಮತ್ತು **4** ಪರ ಶ್ರೀ.**E.O.,** ವಕೀಲರಿಂದ:-

ಈ ದಾವಾ ಆಸ್ತಿಯು ನನಗೆ ನನ್ನ ಗಂಡ ರಾಜಶೇಖರಪ್ಪ ರವರ ಕಡೆಯಿಂದ ಬಂದಿರುತ್ತದೆ ಎಂದರೆ ಸರಿ. ನನ್ನ ಗಂಡ ರಾಜಶೇಖರಪ್ಪ ರವರು ಮೂಲತಃ ದಾವಣಗೆರೆಯವರು. ನಾವು ಮೂಲತಃ ತೂರಟಗಣ್ಣೆ ಗ್ರಾಮದವರು ಇರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಪೂರ್ವಿಕರ ಋಣ ಇತ್ತು ಎಂದು ಹೇಳುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೇನೆ . ನಮ್ಮ ಪೂರ್ವಿಕರಿಗೆ ದಾವಾ ಆಸ್ತಿ ಹೊರತು ಪಡಿಸಿದ ಇತರೆ ಆಸ್ತಿಗಳು ತೊರಣಗಟ್ಟೆ ಗ್ರಾಮದಲ್ಲಿ ಇತ್ತ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ . ನಮ್ಮ ಪೂರ್ವಿಕರು ಯಾರು ಸಹ ತೊರಣಗಟ್ಟೆ ಗ್ರಾಮದವರು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ಪೂರ್ವಿಕರದ್ದು ಎಂದು ತೋರಿಸಲು ನ್ಯಾಯಾಲಯಕ್ಕೆ ಖಾತೆ ನೀಡಿರುತ್ತೇವೆ ಎಂದು ಹೇಳುತ್ತಾರೆ . ನಾನು 10ನೇ ತರಗತಿವರೆಗೂ ಓದಿರುತ್ತೇನೆ . ನಾವು ನಮ್ಮ ಪೂರ್ವಿಕರಿಗೆ ಸೇರಿರುತ್ತದೆ ಎಂದು ನಿಪಿ 2 ದಾಖಲೆಯನ್ನು ಹಾಜರುಪಡಿಸಿರುತ್ತೇನೆ . ನಿಪಿ 2 ದಾಖಲೆಯು ದಿ:08.01.2019 ರಂದು ತೋರಣಗಟ್ಟೆ ಗ್ರಾಮ ಪಂಚಾಯತಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ

ತೀರ್ಮಾನಿಸಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ಸನ್ 2018 ರಲ್ಲಿ ನನ್ನ ಗಂಡನಿಂದ ನನಗೆ ಖಾತೆ ಆಗಿರುತ್ತದೆ ಎಂದು ಹೇಳುತ್ತಾರೆ . ದಿಃ08.01.2019 ರ ಪೂರ್ವದಲ್ಲಿ ದಾವಾ ಆಸ್ತಿ ನಮ್ಮ ಪೂರ್ವಿಕರಿಗೆ ಸೇರಬೇಕೆಂದು ದಾಖಲೆಯನ್ನು ನಾನು ಹಾಜರುಪಡಿಸಿರುತ್ತೇನೆ . ಸಾಕ್ಷಿ ಮುಂದುವರೆಸಿ ನಾನು ನಮ್ಮ ಮಾವ ಶಿವಲಿಂಗಪ್ಪ ರವರ ಹೆಸರಿಗೆ ಸೇರಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ . ನನ್ನ ಮಾವ ಶಿವಲಿಂಗಪ್ಪನವರು ವ್ಯಾಪಾರ ಮಾಡುತ್ತಿದ್ದರು. ದಾವಾ ಆಸ್ತಿಯು ನಮ್ಮ ಪೂರ್ವಿಕರಿಗೆ ಸೇರಿದ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನಮ್ಮ ಪೂರ್ವಿಕರ ಆಸ್ತಿ ಇಲ್ಲದಿದ್ದರು ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಪೂರ್ವಿಕರಿಗೆ ಸಂಬಂಧಿಸಿದ ಯಾವುದೇ ಆಸ್ತಿ ಇಲ್ಲದಿದ್ದರು ಸಹ ನಾವು ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ ಬಂದಿ ತೋರಿಸಲು ನ್ಯಾಯಾಲಯಕ್ಕೆ ಖಾತೆ ನೀಡಿರುತ್ತೇನೆ ಎಂದು ಹೇಳುತ್ತಾರೆ . ನಿಪಿ 6 ದಾಖಲೆಯು ದಿಃ28.07.2018 ನಮೂದು ಇರುತ್ತದೆ ಎಂದರೆ ಸರಿ. ಸದರಿ ನಿಪಿ 6 ರ ದಾಖಲೆಯಲ್ಲಿ ಚೆಕ್ ಬಂದಿ ನಮೂದಿಸಿ ತೋರಣಗಟ್ಟೆ ಪಂಚಾಯತಿ ಖಾತೆ ಮಾಡಿಕೊಡಲು ಅರ್ಜಿ ನೀಡಿರುತ್ತೇವೆ ಎಂದರೆ ಸರಿ. ನಿಪಿ 6 ರಲ್ಲಿ ನಮೂದಿಸಿರುವ ಚೆಕ್ ಬಂದಿಯು ನಿಪಿ 2 ರಲ್ಲಿ ನಮೂದು ಇರುತ್ತದೆ ಎಂದರೆ ಸರಿ. ನಿಪಿ 6 ಅರ್ಜಿಯೊಂದಿಗೆ ನಾವು ಕಂದಾಯ ರಶೀದಿಗಳನ್ನು ಲಗತ್ತಿಸಿ ನೀಡಿರುತ್ತೇವೆ . ನಿಪಿ 7 ರಿಂದ 9 ಕಂದಾಯ ರಶೀದಿಗಳಲ್ಲಿ ದಾವಾ ಆಸ್ತಿಯ ಚೆಕ್ ಬಂದಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾವು ಸದರಿ ನಿಪಿ 7 ರಿಂದ 9 ಕಂದಾಯ ರಶೀದಿಗಳ ಆಧಾರದ ಮೇಲೆ ಪ್ರತಿವಾದಿಗಳಿಗೆ ಸೇರಿದ ಆಸ್ತಿಯನ್ನು ಲಪಾಟಾಯಿಸು ದಾಖಲೆಗಳನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ತೋರಿಸಿದ ದಾವಾ ಆಸ್ತಿಯ ಚೆಕ್ ಬಂದಿಯಲ್ಲಿ ಈಗಾಗಲೇ ಪ್ರತಿವಾದಿ 1 ರವರು ಮನೆ ನಿರ್ಮಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ಪಾಯ ಹಾಕಿದ ಸಂದರ್ಭದಲ್ಲಿ ನಾವು ತಕರಾರು ಮಾಡಿರುತ್ತೇವೆ ಎಂದು ಹೇಳುತ್ತಾರೆ . ನಾವು ಪ್ರತಿವಾದಿಗಳ ವಿರುದ್ದ ಕಟ್ಟಡ ಕಟ್ಟಬಾರದು ಎಂದು ಯಾವುದಾದರು ನ್ಯಾಯಾಲಯದಲ್ಲಿ ಅರ್ಜಿಹಾಕಿ ಪರಿಹಾರ ಕೇಳಿರುತ್ತಿರ ಎಂದರೆ ಸಾಕ್ಷಿ ನಾವು ಗ್ರಾಮ ಪಂಚಾಯತಿ ಅವರಿಗೆ ಅರ್ಜಿ ನೀಡಿರುತ್ತೇವೆ ಎಂದು ಹೇಳುತ್ತಾರೆ .

ಈ ದಾವಾಯಲ್ಲಿ ಪ್ರತಿವಾದಿಗಳು ಕಟ್ಟಡ ಕಟ್ಟಬಾರದು ಎಂದು ನಿಷೇದಾಜ್ಞೆ ಕೋರಿ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ 1 ರವರು ಈ ದಾವೆಯಲ್ಲಿ ಸಲ್ಲಿಸಿರುವ ಏನು ತಕರಾರು ಸಲ್ಲಿಸಿರುತ್ತಾರೆ ತಿಳಿದುಕೊಂಡಿರುವುದಿಲ್ಲ . ದಾವಾ ಆಸ್ತಿಯ ಮಾಲೀಕರು ನಾವು ಇರುವುದಿಲ್ಲ ಎಂದು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸುಳ್ಳು ಹೇಳಿರುತ್ತಾರೆ . ದಾವಾ ಆಸ್ತಿಯ ಚೆಕ್ ಬಂದಿಯಲ್ಲಿ ನಮಗೆ ಸೇರಬೇಕಾದ ಆಸ್ತಿ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಸದರಿ ತಕರಾರು ಹಾಕಿದ ಮೇಲೆ ಇದೇ ನ್ಯಾಯಲಯದಲ್ಲಿಸೂಕ್ತ ಪರಿಹಾರ ಕೋರಿ ಅರ್ಜಿ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಹಾಕಿರುವ ದಾವಾ ಆಸ್ತಿಯ ಚೆಕ್ ಬಂದಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಖಾತಾ ಸಂಖ್ಯೆ 545 ಅಸ್ತಿಯು ದಾವಾ ಆಸ್ತಿಯ ಚೆಕ್ ಬಂದಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ತೋರಿಸಿರುವ ದಾವಾ ಆಸ್ತಿಯ ಚೆಕ್ ಬಂದಿ ಆಸ್ತಿಯು ಪ್ರತಿವಾದಿ 1 ಮತ್ತು 4 ರವರಿಗೆ ಸೇರಿದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ 1 ಮತ್ತು 4 ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅಲಿಸಿ ಸಮಯ ನೀಡಲಾಯಿತು )

<u>ಮರು ವಿಚಾರಣೆ:</u> ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು**,** ಜಗಳೂರು